ಓ ಎಸ್ಃ 541/2022

ಪಿ ಡಬ್ಲ್ಯೂ ಃ 1

ದಿನಾಂಕಃ 30.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಸಿ ಜೆ ವಕೀಲರಿಂದಃ**

ನಮ್ಮ ದೊಡ್ಡಮ್ಮ ನವರು ಅಂದರೆ ವೆಂಕಟಚಲಯ್ಯ ನವರ ತಾಯಿ ತೀರಿಕೊಂಡ 1 ವರ್ಷಕ್ಕೆ ನಮ್ಮ ತಂದೆ ಮತ್ತೊಂದು ಮದುವೆ ಆಗಿರುತ್ತಾರೆ. ಪ್ರತಿವಾದಿ 1 ರವರು ಅವರ ತಾಯಿ ತೀರಿಕೊಂಡಾಗ 1 ವರ್ಷದ ಮಗುವಾಗಿದ್ದರು. 1 ವರ್ಷದ ಮಗುವಾಗಿದ್ದಾಗ ನಮ್ಮ ತಾಯಿಯವರನ್ನು ನಮ್ಮ ತಂದೆ ಮದುವೆಯಾಗಿದ್ದರು ಎಂದರೆ ಸರಿ. ನಮ್ಮ ತಂದೆ ನಮ್ಮ ತಾಯಿಯನ್ನು ಮದುವೆಯಾದ 1 ವರ್ಷಕ್ಕೆ ನಾನು ಹುಟ್ಟಿರುತ್ತೇನೆ. ಪ್ರತಿವಾದಿ 1 ಮತ್ತು ನನಗೂ ಸುಮಾರು 2 ವರ್ಷದ ವಯಸ್ಸಿ ನ ಅಂತರ ಇರುತ್ತದೆ ಎಂದರೆ ಸರಿ.

ದಿನಾಂಕಃ 7.09.1946 ರಲ್ಲಿ ನಮ್ಮ ಅಣ್ಣ ಪ್ರತಿವಾದಿ 1 ರವರು ಜನಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಯಾವ ವರ್ಷ ಜನಿಸಿರುತ್ತೇನೆ ಎಂದು ನನಗೆ ಗೊತ್ತಾಗುವುದಿಲ್ಲ. 1946 ರಲ್ಲಿ ನನ್ನ ಅಣ್ಣ ಹುಟ್ಟಿದ 2/3 ವರ್ಷದ ನಂತರ ನಾನು ಮತ್ತು ನನ್ನ ಅಕ್ಕ ಜನಿಸಿರುತ್ತೇವೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ಹಾಕಿರುವ ದಾಖಲಾತಿಗಳನ್ನು ಯಾವಾಗ ನಾನು ಪಡೆದಿರುತ್ತೇನೆ ಎಂದರೆ ನನಗೆ ಹೇಳಲು ಆಗುವುದಿಲ್ಲ, ನಾನು ಓದಿಲ್ಲ ಎಂದು ನುಡಿಯುತ್ತಾರೆ.

**ಪ್ರಶ್ನೆಃ ಈ ದಾವೆಯಲ್ಲಿ ಹಾಕಿರುವ ದಾಖಲಾತಿಗಳನ್ನು ನಾನು ದಾವೆ ಹೂಡುವ ಮುಂಚೆ ಪಡೆದಿರುತ್ತೇನಾ ಅಥವಾ ದಾವೆ ಹಾಕಿದ ನಂತರ ಪಡೆದಿರುತ್ತೇನಾ ಎಂದರೆ ಸಾಕ್ಷಿ**

**ಉತ್ತರಃ ನಾನು ಪಂಚಾಯಿತಿ ಆದ ನಂತರ ಸದರಿ ದಾಖಲಾತಿಗಳನ್ನು ಪಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ.**

ಸದರಿ ಪಂಚಾಯಿತಿ 2010 ರಲ್ಲಿ ಆಗಿರುತ್ತದೆ. ಸದರಿ ಪಂಚಾಯಿತಿ ಯಾವ ದಿನಾಂಕ ಮತ್ತು ತಿಂಗಳು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ, ನಾನು ಓದಿರುವುದಿಲ್ಲ. ಸದರಿ ಪಂಚಾಯಿತಿಯಲ್ಲಿ ಏನು ತೀರ್ಮಾನವಾಯಿತು ಎಂದರೆ ಸಾಕ್ಷಿ ನನಗೆ ಆಸ್ತಿ ಕೊಡುತ್ತೇನೆಂದು ಇವತ್ತು, ನಾಳೆ ಎಂದು ಮುಂದುವರೆಸಿಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ. 2010 ರ ಹಿಂದೆ ಆಸ್ತಿಯಲ್ಲಿ ಭಾಗ ಕೊಡಲು ಕೇಳಿದ್ದರಾ , ಒಂದು ವೇಳೆ ಕೇಳಿದ್ದರೆ ಯಾವಾಗ ಎಂದು ಕೇಳಿದರೆ 2010 ಕ್ಕಿಂತ ಹಿಂದೆ ಭಾಗ ಬೇಕೆಂದು ನಾನು ಕೇಳಿರುವುದಿಲ್ಲ. ನಾನು ವಯಸ್ಕಳಾದ ಮೇಲೆ 2010ರ ವರೆಗೂ ಯಾವ ದಿನವೂ ಭಾಗ ಬೇಕೆಂದು ಕೇಳಿರುವುದಿಲ್ಲ. 2010ಕ್ಕಿಂತ ಹಿಂದೆ ಯಾವುದೇ ದಾವೆಯನ್ನು

ನಾನು ಹಾಕಿರುವುದಿಲ್ಲ. ನಾನು 2010 ರಲ್ಲಿ ರಾಜಿ ಪಂಚಾಯಿತಿ ಆದ ನಂತರ ಎಲ್ಲ ದಾಖಲಾತಿಗಳನ್ನು ಪಡೆದುಕೊಂಡಿರುತ್ತೇನೆ. ಆ ದಾಖಲಾತಿಗಳನ್ನು ಯಾವ ದಿನಾಂಕ ಮತ್ತು ವರ್ಷದಲ್ಲಿ ನಾನು ತೆಗೆದುಕೊಂಡಿರುತ್ತೇನೆ ಎಂದರೆ ಸಾಕ್ಷಿ ನಾನು 2010 ರಲ್ಲಿ ಪಂಚಾಯಿತಿ ಆದ 1 ವಾರ , ತಿಂಗಳ ಒಳಗಾಗಿ ಸದರಿ ದಾಖಲಾತಿಗಳನ್ನು ಪಡೆದಿರುತ್ತೇನೆ ಎಂದು ನುಡಿಯುತ್ತಾರೆ.

ನಾನು ಯಾವ ಯಾವ ದಾಖಲಾತಿಗಳನ್ನು 2010 ರ ಪಂಚಾಯಿತಿ ನಂತರ 1 ವಾರ, ತಿಂಗಳ ಒಳಗೆ ಪಡೆದಿರುತ್ತೇನೆ ಎಂದರೆ ಸಾಕ್ಷಿ ಸ.ನಂ. 63/5 ರಲ್ಲಿ ಪಹಣಿಗಳು, ಸ.ನಂ. 51/5 ರ 24 ಗುಂಟೆ ಜಮೀನಿನ ಪಹಣಿ ಪತ್ರಗಳು , ನಮ್ಮ ತಂದೆ ಇರುವ 39/42 ರ ಮನೆಯ ದಾಖಲಾತಿಗಳು , ಸ.ನಂ. 34/6 ರ 30 ಗುಂಟೆ ಜಮೀನಿನ ಪಹಣಿ ಪತ್ರಗಳು, ಸ.ನಂ. 63/ಎ ರಲ್ಲಿ 19 ಗುಂಟೆ ಜಮೀನಿನ ಪಹಣಿ ಮತ್ತು ಪತ್ರಗಳನ್ನು ತೆಗೆದುಕೊಂಡಿರುತ್ತೇನೆ ಮತ್ತು ಸದರಿ ದಾಖಲಾತಿಗಳನ್ನು ಮಾನ್ಯ ನ್ಯಾಯಾಲಯದ ಮುಂದೆ ನಾನು ಈಗಾಗಲೇ ನೀಡಿರುತ್ತೇನೆ. ನಾನು ನ್ಯಾಯಲಯದ ಮುಂದೆ ಸಲ್ಲಿಸಿರುವ ನಿ ಪಿ 5 ರಿಂದ ನಿ ಪಿ 9 ರ ದಾಖಲಾತಿಗಳನ್ನು ನಾನು 2010 ರ ಪಂಚಾಯಿತಿಯ ನಂತರ ಪಡೆದಿರುವ ದಾಖಲಾತಿ ಆಗಿರುತ್ತದೆ. ನಿ ಪಿ 5 ರಿಂದ ನಿಪಿ 9 ದಾಖಲಾತಿಗಳನ್ನು 2010 ರ ಪಂಚಾಯಿತಿ ಆದ 1 ವಾರ, ತಿಂಗಳ ಒಳಗೆ ಪಡೆದಿರುತ್ತೇನೆ. ನಾನು 2010 ರಲ್ಲಿ ಪಡೆದಿರುವ ದಾಖಲಾತಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ನಾನು ದಾವಾ ಐಟಂ ನಂಬರ್ 6 ಕ್ಕೆ ಸಂಬಂದಪಟ್ಟ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಎಲ್ಲ ದಾಖಲಾತಿಗಳನ್ನು ನ್ಯಾಯಾಲಯಕ್ಕೆ 2011 ರಿಂದ ಹಾಜರುಪಡಿಸಿರುತ್ತೇನೆ. ದಾವಾ ಐಟಂ ನಂಬರ್ 6 ಇದು 2009ರಲ್ಲಿ ಪ್ರತಿವಾದಿ 2 ರವರ ಹೆಸರಿಗೆ ಬರುತ್ತಿತ್ತು ಎಂದರೆ ಸರಿಯಲ್ಲ. ಈ ದಿನವೂ ದಾವಾ ಐಟಂ ನಂಬರ್ 6 ರ ಸ್ವತ್ತು ಪ್ರತಿವಾದಿ 2 ರವರ ಹೆಸರಿನಲ್ಲಿ ಬರುತ್ತಿದೆ, ಅದನ್ನು ಈಗ ಹಾಜರುಪಡಿಸಲು ಆಗುತ್ತದೆಯೋ ಎಂದರೆ ಸಾಕ್ಷಿ ನಾನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಿ ಪಿ 5 ರಿಂದ ನಿ ಪಿ 9 ರ ದಾಖಲಾತಿಗಳನ್ನು ಯಾರು ತೆಗೆದುಕೊಂಡಿರುತ್ತಾರೆ ಎಂದರೆ ಸಾಕ್ಷಿ ನಮ್ಮ ತಾಯಿ ಬದುಕಿದ್ದಾಗ ನಾನು ಮತ್ತು ನಮ್ಮ ಅಕ್ಕ ತಂಗಿಯರು ಸೇರಿ ದಾಖಲಾತಿಗಳನ್ನು ತೆಗೆದುಕೊಂಡಿರುತ್ತೇವೆ. ರಾಜಿ ಪಂಚಾಯಿತಿ ಆದ ನಂತರ ನನ್ನ ತಾಯಿ , ನನ್ನ ಅಕ್ಕ ಮತ್ತು ನಾನು 2010 ರಲ್ಲಿ ಯಾವುದೇ ದಾಖಲಾತಿಗಳನ್ನು ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆ ರೀತಿಯ ಯಾವುದೇ ದಾಖಲಾತಿಗಳನ್ನು ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಿ ಪಿ 5 ರಿಂದ 9 ರ ದಾಖಲಾತಿಗಳು ದಿನಾಂಕಃ 27.07.2015 ರಲ್ಲಿ ಪಡೆದುಕೊಂಡಿರುವ ದಾಖಲಾತಿಗಳು ಎಂದರೆ ಸಾಕ್ಷಿ ನಾನು ಎಲ್ಲ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.ನಿಪಿ 5 ರಿಂದ ನಿಪಿ 9 ರ ದಾಖಲಾತಿಗಳನ್ನು ಪಡೆದಿರುವ ಬಗ್ಗೆ ನನ್ನ ವಾದಪತ್ರದಲ್ಲಿ ಮತ್ತು ಪ್ರಮಾಣಪತ್ರದಲ್ಲಿ ಹೇಳಿರುವುದಿಲ್ಲ ಎಂ ದರೆ ಸರಿಯಲ್ಲ. ನಾನು ದಾಖಲಾತಿಗಳನ್ನು ಪಡೆದಾಗ ಎಲ್ಲ ದಾಖಲಾತಿಗಳು ಯಾರ ಹೆಸರಿನಲ್ಲಿತ್ತು ಎಂದರೆ ಸಾಕ್ಷಿ ನನ್ನ ಅಣ್ಣ ಪ್ರತಿವಾದಿ 1 ರವರ ಹೆಸರಿನಲ್ಲಿತ್ತು ಎಂದು ನುಡಿಯುತ್ತಾರೆ.

**ಮುಂದುವರೆದ ವಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ**